# 4. ಸ್ವಂತ ಮನೆ

ಸಿಮೆಂಟು ಬೇಡ, ಇಟ್ಟಿಗೆ ಬೇಡ;
ನಾವೇ ಮನೆಯನು ಕಟ್ಟುವೆವು;
ಝುಣ ಝುಣ ರೊಕ್ಕವು ಸಿಕ್ಕರು ಬೇಡ
ಮಣ್ಣೂ ಉಸುಕೂ ಒಟ್ಟುವೆವು.

ಕಟ್ಟಿಗೆ ಬೇಡ, ಕಬ್ಬಿಣ ಬೇಡ
ಆಳುಗಳೊಬ್ಬರು ಬೇಡಣ್ಣ;
ಕಣ್ಣು ಮುಚ್ಚಿ ಕಣ್ ತೆರೆದರೆ ಸಾಕು
ತಯಾರಾಗುವದು ನೋಡಣ್ಣ.

ಬಡಿಗರು ಕಮ್ಮಾರುಪ್ಪಾರೇತಕೆ ?
ಬಡಬಡ ನಾವೇ ಒಟ್ಟುವೆವು;
ಎಲ್ಲಿ ಹುಡುಕಿದರು ಸಿಗಲಾರದ ಮನೆ
ಒಂದೇ ಚಣದಲಿ ಕಟ್ಟುವೆವು.

ಕಪಾಟು, ಕಿಡಿಕಿಯು, ಕಿಂಡಿಗಳಿಲ್ಲ;
ಸುಣ್ಣ ಬಣ್ಣಗಳ ಬಳಿದಿಲ್ಲ;
ಕಳ್ಳರು ಗಿಳ್ಳರು ನುಗ್ಗಲು ಸಾಧ್ಯವೆ ?
ಯಾರೂ ಚಿಂತಿಸಬೇಕಿಲ್ಲ.

ಚಿಲಕವು, ಕೊಂಡಿಯು, ಕೀಲಿಗಳೇತಕೆ ?
ಅಗಳಿಯು ರಗಳೆಯ ಹಚ್ಚಿಲ್ಲ;
ಖರ್ಚಿನ ಮಾತೇ ಬಾರದು ಇಲ್ಲಿ
ನಗರಸಭೆಯು ಕರ ಹೇರಿಲ್ಲ.

ಸಾಲದ ಚಿಂತೆಯು, ಆಳಿನ ಗೋಳು–
ಒಂದೆ ? ಎರಡೆ ? ಎಲ್ಲಿ ಕೊನೆ ?
ಅಪ್ಪಟ ಮಳಲಲಿ ಕಟ್ಟಿದೆವಿದನು
ಗುಬ್ಬಿಯ ಗೂಡಿದು, ಸ್ವಂತ ಮನೆ.

– ಚೆನ್ನವೀರ ಕಣವಿ

## ಶಬ್ದಗಳ ಅರ್ಥ :

**ಬಡಿಗರು** = ಕಟ್ಟಿಗೆಯ ಕೆಲಸ ಮಾಡುವವರು
**ಅಗಳಿ** = ಬಾಗಿಲಿಗೆ ಅಡ್ಡವಾಗಿ ಸಿಕ್ಕಿಸುವ ಕಟ್ಟಿಗೆಯ ತುಂಡು
**ಕರ** = ತೆರಿಗೆ; **ಅಪ್ಪಟ** = ಚೊಕ್ಕ

**ಕೃತಿ 1) ಕೆಳಗಿನ ಪ್ರಶ್ನೆಗಳಿಗೆ ಒಂದೆ ವಾಕ್ಯದಲ್ಲಿ ಉತ್ತರಿಸಿರಿ.**

1) ಮನೆಯನ್ನು ಕಟ್ಟಲು ಉಪಯೋಗಿಸುವ ಸಾಧನಗಳನ್ನು ಬರೆಯಿರಿ ?
2) ಬೆಳಕು ನೀಡಲು ಮನೆಗೆ ಅವಶ್ಯವಾಗಿ ಏನು ಬೇಕು ?
3) ಸ್ವಂತ ಮನೆ ಯಾವುದು ಎಂದು ಹೇಳುತ್ತಾರೆ ?
4) ಮನೆಯ ಕರವನ್ನು ಯಾರು ತೆಗೆದುಕೊಳ್ಳುವರು ?

### ಕೃತಿಗಳು

**I) ಕೆಳಗಿನ ಜಾಲವನ್ನು ಪೂರ್ಣಗೊಳಿಸಿರಿ.**

ಮನೆಯನ್ನು ಕಟ್ಟಲು ಬೇಕಾಗುವ ಎರಡು ವಸ್ತುಗಳನ್ನು ಹೆಸರಿಸಿರಿ ''ಕ'' ಕಾರದಿಂದ ಪ್ರಾರಂಭವಾಗಿರಬೇಕು.

| | |
|---|---|
| | |

**II) ಯಾರು ಯಾವ ಕೆಲಸ ಮಾಡುವರು?**


| | |
|---|---|
| ಬಡಿಗರು | |
| ಕಮ್ಮಾರರು | |

**III) ಕಳ್ಳರಿಂದ ರಕ್ಷಿಸಲು ಬಾಗಿಲು ಭದ್ರ ಪಡಿಸುವ ಸಾಧನಗಳು.**

| | | |
|---|---|---|
| | | |

**IV) ಕೆಳಗಿನ ಗೋಲಾಕಾರದಲ್ಲಿ ಬಂದಿರುವ ಶಬ್ದಗಳನ್ನು ಪದ್ಯದಲ್ಲಿ ಬಂದಂತೆ ಕ್ರಮಬದ್ಧವಾಗಿ ಮುಂದಿನ ಜಾಲಾಕೃತಿಯಲ್ಲಿ ಬರೆಯಿರಿ.**

ಚಿಲಕ, ಕಿಂಡಿ, ಕಿಡಕಿ,
ಕಪಾಟು, ಸುಣ್ಣ, ಕೊಂಡಿ, ಕಬ್ಬಿಣ,
ಸಿಮೆಂಟು, ಕಟ್ಟಿಗೆ, ಉಸುಕು,
ಇಟ್ಟಿಗೆ, ಕೀಲಿ, ಮಣ್ಣು,
ಬಣ್ಣ, ಅಗಳಿ



**ಕೃತಿ V) ಕೆಳಗೆ ತೋರಿಸಿದ ಉದಾಹರಣೆಯಂತೆ ಉಳಿದವುಗಳನ್ನು ಪೂರ್ಣಗೊಳಿಸಿ ಚೌಕಟ್ಟಿನಲ್ಲಿ ತುಂಬಿರಿ.**

| | |
|---|---|
| ಬಡಿಗರು | ಕಟ್ಟಿಗೆಯ ಕೆಲಸ ಮಾಡುವವರು |
| ಕಮ್ಮಾರ | |
| ಸಿಂಪಿಗ | |
| ನೇಕಾರ | |
| ಕುಂಬಾರ | |
| ಬುರುಡ | |

CMSU1Z

**VI) I) ಅಂತ್ಯಪ್ರಾಸದ ಶಬ್ದಗಳನ್ನು ಜೋಡಿಸಿ ಬರೆಯಿರಿ.**

| | | | |
|---|---|---|---|
| ಕಟ್ಟುವೆವು → | | ಬೇಡಣ್ಣ → | |
| ಹಚ್ಚೆಲ್ಲ → | | ಕೊನೆ → | |

**VII) ಕೆಳಗಿನ ಶಬ್ದಗಳಿಗೆ ತತ್ಸಮ - ತದ್ಭವ ಬರೆಯಿರಿ.**

| | | | |
|---|---|---|---|
| ಇಟ್ಟಿಗೆ | | ಋಣ | |
| ಚಣ | | ರಗಳೆ | |

**ಉಪಕ್ರಮ :** ಬೇರೆ ಬೇರೆ ಗುಬ್ಬಿಯ ಗೂಡುಗಳ ಚಿತ್ರಪಟ ಬರೆದು ವರ್ಗದಲ್ಲಿ ತೂಗು ಹಾಕಿರಿ.